**ಅಸಲು ದಾವಾ ನಂಃ32/2020**
**ಪಿ.ಡಬ್ಲ್ಯೂಃ 1,**

**ದಿನಾಂಕ :17-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು :- ಶ್ರೀ. ಬಿ.ಎಸ್.ಬಿ. ಪ್ರತಿವಾದಿ ಪರ ವಕೀಲರಿಂದ :**

ನನ್ನ ತಂದೆಗೆ 5 ಜನ ಸಹೋದರರು. ನನ್ನ ತಂದೆಯ ಸಹೋದರರಿಗೆ ಎಷ್ಟೆಷ್ಟು ಜಮೀನು ಬಂದಿದೆ ಎಂದು ಗೊತ್ತಿಲ್ಲಾ. ಯಾವ ಸರ್ವೆ ನಂಬರ ಯಾರಿಗೆ ಬಂದಿದೆ ಅಂತಾ ಗೊತ್ತಿಲ್ಲಾ. ಇಮಾಮೋದ್ದಿನ ಇವರಿಗೆ ಮಕ್ಕಳು ಇರಲಿಲ್ಲಾ ಎಂದರೆ ಸರಿ. ಇಮಾಮೋದ್ದಿನಗೆ ಬಂದ ಜಮೀನಿನಲ್ಲಿ ಆತ ತೀರಿ ಹೋದ ನಂತರ ಆತನ ಜಮೀನಿನಲ್ಲಿ ನನ್ನ ತಂದೆ ಎಷ್ಟು ಬಂದಿದೆ ಅಂತಾ ಗೊತ್ತಿಲ್ಲಾ. ನಮ್ಮ ತಂದೆಗೆ ಇಮಾಮೋದ್ದಿನಿಂದ ಬಂದ ಜಮೀನುಗಳು ಈ ದಾವೆಯಲ್ಲಿ ಸೇಪರ್ಡೆ ಮಾಡಿದ್ದೀರಾ ಪ್ರಶ್ನಗೆ ಸಾಕ್ಷಿ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ಸ.ನ. 224/ಇ ರ 3 ಎಕರೆ 20 ಗುಂಟೆ ಯಲ್ಲಿ 2 ಎಕರೆ 20 ಗುಂಟೆ ಖರಿದಿಸಿದ್ದು ಅದನ್ನು ಸಹ ಈ ದಾವೆಯಲ್ಲಿ ಸೇಪರ್ಡೆ ಮಾಡಿದ್ದೇನೆ ಅದರಲ್ಲಿ ಸಹ ಪಾಲು ಬರುವುದಿಲ್ಲಾ ಎಂದರೆ ಗೊತ್ತಿಲ್ಲಾ. ಗಡಿಕೇಶ್ವರನಲ್ಲಿದ್ದ ಜಮೀನನ್ನು ನನ್ನ ತಂದೆ ಮಾರಾಟ ಮಾಡಿ ಅದರಲ್ಲಿ ಬಂದ ಹಣದಿಂದ ನಮಗೆ ಬೆಳ್ಳಿ ಬಂಗಾರ ನೀಡಿ ಮತ್ತು ಅವರವರ ಹಿಸ್ಸೆಯನ್ನು ಹಂಚಿದ್ದಾರೆ ಎಂದರೆ ಗೊತ್ತಿಲ್ಲಾ. ನಮ್ಮ ತಂದೆ ಓಎಸ್.ನಂ:82/2016 ನ್ನು ತನ್ನ ಮಕ್ಕಳ ಮೇಲೆ ದಾವೆಯನ್ನು ಸಲ್ಲಿಸಿ ಅದರಲ್ಲಿ ಅವರು ಈಗಾಗಲೇ ಪಾಲು ವಿಭಾಗ ಮಾಡಿ ಎಲ್ಲಾ ಮಕ್ಕಳಿಗೆ ಆಸ್ತಿಯನ್ನು ಹಂಚಿದ್ದೇನೆಂದು ವಾದ ಪತ್ರದಲ್ಲಿ ಬರೆಸಿದ್ದಾರೆ ಎಂದರೆ ಗೊತ್ತಿಲ್ಲಾ. ಸದರಿ ದಾವೆ 82/2016 ನನ್ನ ತಂದೆ ಪಾಲು ವಿಭಾಗ ಆಗಿದೆ ಎಂದು ಬರೆದ ಕಾರಣ ಅವರು ಸಲ್ಲಿಸಿದ ಕೇಸ ವಾದ ಪತ್ರ ತಿರಸ್ಕೃತ ಗೊಂಡಿದೆ ಎಂದರೆ ನನಗೆ ಗೊತ್ತಿಲ್ಲಾ. ನಮ್ಮ ತಂದೆ ಪಾಲು ವಿಭಾಗ ಮಾಡಿಕೊಟ್ಟ ಕಾರಣ ನನ್ನ ತಮ್ಮಂದಿರು ಅವರವರ ಹಿಸ್ಸೆಯಲ್ಲಿ ಕಬ್ಜೆ ಹೊಂದಿ ವಹಿವಾಟು ಮಾಡುತ್ತಿದ್ದು ನಾನು ಗಡಿಕೇಶ್ವರದಲ್ಲಿದ್ದ ಕಾರಣ ನಾನು ಸ್ವಾಧೀನದಲ್ಲಿ ಇಲ್ಲಾ ಎಂದರೆ ಸರಿಯಲ್ಲ . ಸ.ನ. 201/2, 201/1 ಮತ್ತು 117 ನನ್ನ ಸಹೋದರ ಸ್ವಾಧೀನದಲ್ಲಿದ್ದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲಾ ಎಂದರೆ ಗೊತ್ತಿಲ್ಲಾ. ನಮ್ಮ ತಂದೆ ಅವರ ಜೀವಿತ ಅವಧಿಯಲ್ಲಿ ಪಾಲು ವಿಭಾಗ ಮಾಡಿ ಅದರ ಪ್ರಕಾರ ನನ್ನ ಸಹೋದರರು ಅವರ ರವರ ಹಿಸ್ಸೆಯಲ್ಲಿ ಸ್ವಾಧೀನ ಹೊಂದಿದ್ದು, ಅವರಿಗೆ

**ಅಸಲು ದಾವಾ ನಂಃ32/2020**
**ಪಿ.ಡಬ್ಲ್ಯೂ 1,**

ತೊಂದರೆ ಕೊಡಲು ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ನನಗೆ ಈ ದಾವೆಯಲ್ಲಿ ಪಾಲು ಕೇಳಲು ಅರ್ಹಳು ಇಲ್ಲಾ ಎಂದರೆ ಸರಿಯಲ್ಲ . ನಾನು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ

**ಪಾಟಿ ಸವಾಲು: ಪ್ರತಿವಾದಿ ನಂ-4 ಮತ್ತು 10 ಪರ ವಕೀಲರಿಂದ: ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**